ನವೆಂಬರ್ 14, 2016

**ಮಹಾತ್ಮ ಗಾಂಧಿ (ನೂತನ ) ಶ್ರೇಣಿಯ ಬ್ಯಾಂಕ್ ನೋಟುಗಳ ವಿತರಣೆಯ ಅನುವು ಮಾಡಿಕೊಡುವ ಉದ್ದೇಶದಿಂದ ಕಾರ್ಯಪಡೆಯ ಸಂಯೋಜನೆ- ಎಟಿಎಂ ಗಳ ಮರುಹೊಂದಾಣಿಕೆ ಹಾಗೂ ಪುನಃಸಂಕ್ರಿಯಾಕರಣ**

ನೂತನ ವಿನ್ಯಾಸದ ಅಧಿಕ ಮೌಲ್ಯದ ರೂ.2000 ಬ್ಯಾಂಕ್ ನೋಟುಗಳನ್ನು ಸೇರಿಸಿ ಮಹಾತ್ಮ ಗಾಂಧಿ (ನೂತನ) ಶ್ರೇಣಿಯ ಬ್ಯಾಂಕ್ ನೋಟುಗಳನ್ನು ಪರಿಚಯಿಸಿರುವ ಕಾರಣದಿಂದಾಗಿ ಎಲ್ಲ ಎಟಿಎಂ/ ನಗದು ನಿರ್ವಹಣಾ ಯಂತ್ರಗಳನ್ನುನೂತನ ನೋಟುಗಳನ್ನು ವಿತರಣೆ ಮಾಡಲು ಮರುಜೋಡನೆ ಮಾಡುವ ಅಗತ್ಯವಿದೆ.

2. ಸಾರ್ವಜನಿಕರ ಹಣದ ಅವಶ್ಯಕತೆಯನ್ನು ಪೂರೈಸುವಲ್ಲಿ ಹಾಗೂ ನಗದು ವಿತರಿಸುವಲ್ಲಿ ಎ ಟಿ ಎಂ ಗಳ ಪಾತ್ರ ಮುಖ್ಯವಾಗಿದೆ. ಮರು ಸಕ್ರಿಯಗೊಳಿಸಿರುವ ಎ ಟಿ ಎಂ ಗಳು ನೋಟುಗಳ ದೊರೆಯುವಿಕೆಯನ್ನು ಹೆಚ್ಚಿಸುತ್ತದೆ.

3. ಎ ಟಿ ಎಂ ಗಳ ಮರು ಜೋಡನೆಯು ಬಹು ಸಂಸ್ಥೆಗಳನ್ನು ಹೊಂದಿವೆ - ಬ್ಯಾಂಕ್ , ಎ ಟಿ ಎಂ ಉತ್ಪಾದಕರು , ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯ , ಸ್ವಿಚ್ ಆಪರೇಟರ್ಸ್ , ಇತ್ಯಾದಿ ಹಾಗೂ ಇತರೆ ಅನೇಕ ಕಾರ್ಯಗಳನ್ನು ಹೊಂದಿರುವ ಕಾರಣ . ಈ ಎಲ್ಲ ಸಂಸ್ಥೆಗಳ ಸಮನ್ವಯತೆಯು ಈ ಮರುಜೊಡನೆ ಕಾರ್ಯಕ್ಕೆ ಅಗತ್ಯವಿದೆ.

4. ಈ ನಿಟ್ಟಿನಲ್ಲಿ ಮಾರ್ಗದರ್ಶನ ನೀಡುವ ದೃಷ್ಟಿಯಿಂದ ಶ್ರೀ ಎಸ್ ಎಸ್ ಮುಂದ್ರಾ , ಉಪ ಗವರ್ನರ್ , ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ರಚಿಸಲು ನಿರ್ಧರಿಸಲಾಯಿತು. ಈ ಟಾಸ್ಕ್ ಫೋರ್ಸ್ ನಲ್ಲಿ ಇರುವ ಸದಸ್ಯರು :

I. ಭಾರತೀಯ ಸರ್ಕಾರ, ಹಣಕಾಸು ಸಚಿವಾಲಯ, ಆರ್ಥಿಕ ವ್ಯವಹಾರಗಳ ಇಲಾಖೆಯ ಪ್ರತಿನಿಧಿಗಳು. (ಸದಸ್ಯರು)

II. ಭಾರತೀಯ ಸರ್ಕಾರ, ಹಣಕಾಸು ಸಚಿವಾಲಯ, ಹಣಕಾಸು ವ್ಯವಹಾರಗಳ ಇಲಾಖೆಯ ಪ್ರತಿನಿಧಿಗಳು (ಸದಸ್ಯರು)

III. . ಭಾರತೀಯ ಸರ್ಕಾರ , ಗೃಹ ಇಲಾಖೆ (ಸದಸ್ಯರು)

IV ಭಾರತದಲ್ಲಿ ಅತಿ ಹೆಚ್ಚು ಎ ಟಿ ಎಂ ಗಳನ್ನು ಹೊಂದಿರುವ ನಾಲ್ಕು ಬ್ಯಾಂಕುಗಳಾದ ಎಸ್ ಬಿ ಐ, ಆಕ್ಸಿಸ್ ಬ್ಯಾಂಕ್, ಐ ಸಿ ಐ ಸಿ ಐ ಬ್ಯಾಂಕ್ ಮತ್ತು ಎಚ್ ಡಿ ಎಫ್ ಸಿ ಬ್ಯಾಂಕು ಗಳ ಪ್ರತಿನಿಧಿಗಳು (ಸದಸ್ಯರು)

V ಎನ್ ಪಿ ಸಿ ಐ ಪ್ರತಿನಿಧಿಗಳು (ಸದಸ್ಯರು)

VI ಮುಖ್ಯ ಮಹಾ ವ್ಯವಸ್ಥಾಪಕರು, ಕರೆನ್ಸಿ ನಿರ್ವಹಣಾ ಇಲಾಖೆ (ಸದಸ್ಯರು)

VII ಮುಖ್ಯ ಮಹಾ ವ್ಯವಸ್ಥಾಪಕರು, ಪಾವತಿ ಮತ್ತು ಇತ್ಯರ್ಥ ವ್ಯವಸ್ಥೆಯ ಇಲಾಖೆ, (ಸದಸ್ಯ ಕಾರ್ಯದರ್ಶಿಗಳು)

5. ಎ ಟಿ ಎಂ ಕಚೇರಿ ಪರಿಕರ ತಯಾರಕರು, ನಿರ್ವಹಣಾ ಸೇವೆ ಒದಗಿಸುವವರು , ಹಣ ಸಾಗಿಸುವ ಕಂಪನಿಗಳು , ವೈಟ್ ಲೇಬಲ್ ಎಟಿಎಂಗಳಿಂದ ತಲಾ ಒಂದು ಸದಸ್ಯರನ್ನು ಟಾಸ್ಕ್ ಫೋರ್ಸ್ ಚರ್ಚೆಗೆ ಆಹ್ವಾನಿಸಲಾಗಿದೆ. ಅಗತ್ಯವಿದ್ದಲ್ಲಿ ಟಾಸ್ಕ್ ಫೋರ್ಸ್ ಇತರರನ್ನು ಆಹ್ವಾನಿಸಬಹುದು.

6. ಟಾಸ್ಕ್ ಫೋರ್ಸಿನ ಉಲ್ಲೇಖದ ವಿಷಯಗಳು ಈ ಕೆಳಗಿನಂತಿವೆ :

I) ಎಲ್ಲ ಎ ಟಿ ಎಂ ಗಳನ್ನು ತ್ವರಿತವಾಗಿ ಮರು ಜೋಡಣೆ ಮಾಡುವುದು.

II) ಸಂಭಂದಿತ ಇನ್ನ್ಯಾವುದೇ ವಿಷಯಗಳು

7. ಡಿ ಪಿ ಎಸ್ ಎಸ್ , ಕೇಂದ್ರ ಕಚೇರಿ , ಕಾರ್ಯದರ್ಶಿ ಬೆಂಬಲ ನೀಡುತ್ತದೆ.

ಪತ್ರಿಕಾ ಪ್ರಕಟಣೆ : 2016-2017/1197

ಅಲ್ಪನ ಕಿಲ್ಲಾವಾಲಾ
ಪ್ರಧಾನ ಸಲಹೆಗಾರರು